

ಹಲವು ಆಯಾಮಗಳನ್ನು ತಿಳಿದುಕೊಂಡೆ. ಓದು ಮತ್ತು ಒಲವು ಒಂದೇ ಆಗಿರಬೇಕೆಂಬುದು ನನ್ನ ಬಯಕೆಯಾಗಿತ್ತು'' ಎಂದು ವಿವರಿಸುತ್ತಾರೆ.

'ರಂಗಭೂಮಿ ಅಭಿನಯವನ್ನಷ್ಟೇ ಅಲ್ಲ, ಜೀವನ ಪಾಠವನ್ನೂ ಕಲಿಸಿಕೊಟ್ಟಿದೆ' ಎನ್ನುವ ದಿಶಾ, ಅದಕ್ಕೆ ಹಲವು ಉದಾಹರಣೆಗಳನ್ನೂ ನೀಡುತ್ತಾರೆ. 'ರಂಗಭೂಮಿ ಎಂದರೆ ಭೂಮಿಯಂತೆ. ಆಗಸದೆತ್ತರಕ್ಕೆ ಹೋದರೂ ಮರಳಿ ಭೂಮಿಗೆ ಇಳಿಯುವ ವಿನಮ್ರತೆ, ಎಷ್ಟೇ ಪಾತಾಳಕ್ಕೆ ಹೋದರೂ ಕುಗ್ಗದೆ ಮತ್ತೆ ಮೇಲೇಳುವ ಛಲ ಕಲಿಸಿಕೊಡುವುದು ರಂಗಭೂಮಿ. ಇಲ್ಲಿ ಯಾವುದೂ ಶಾಶ್ವತವಲ್ಲ ಎನ್ನುತ್ತಲೇ, ಕಲಿಯಲು ಸಾಗರದಷ್ಟಿದೆ ಎಂಬ ಎಚ್ಚರಿಕೆಯ ಗಂಟೆಯನ್ನು ಸದಾ ಮೊಳಗಿಸುವುದೇ ರಂಗಭೂಮಿ. ನಮ್ಮ ಕಣ್ಣು, ಮನಸ್ಸು ತೆರೆದಿದ್ದರೆ ಈ ಸೂಕ್ಷ್ಮಗಳನ್ನು ಕಂಡುಕೊಳ್ಳುವುದು ಸುಲಭ' ಎನ್ನುತ್ತಾರೆ.

ಸಿನಿಮಾಗಳು ಭಿನ್ನ ಭಿನ್ನ ಕಲಾ, ಸೃಜನಶೀಲತೆಯ ಪ್ರಯೋಗಗಳನ್ನು ಒಳಗೊಂಡಿರಬೇಕು ಎನ್ನುವುದು ದಿಶಾ ನಿಲುವು. 'ಪ್ರತಿ ನಾಟಕವನ್ನೂ ನಾವು ಪ್ರದರ್ಶನ ಎಂದು ನೋಡದೆ, ಅದೊಂದು ಪ್ರಯೋಗ ಎಂದೇ ಪರಿಗಣಿಸುತ್ತೇವೆ. ಇಂದು ಮಾಡಿದ್ದು ನಾಳೆ ಸಂಪೂರ್ಣ ಬೇರೆಯಾಗಿರುತ್ತದೆ. ಹಾಗೆಯೇ ಸಿನಿಮಾ ಕೂಡ ಒಂದಕ್ಕೊಂದು ಭಿನ್ನ, ಹಾಗೆಯೇ ಕ್ರಿಯಾಶೀಲ ಆಗಿರಬೇಕು' ಎನ್ನುವ ಅವರು, 'ಯಾವುದೇ ಆಗಲಿ, ನಿಂತ ನೀರಾಗಬಾರದು. ಕಾಲಕ್ಕೆ ತಕ್ಕಂತೆ ಹೊಸತನಗಳೊಂದಿಗೆ ಸಾಗುತ್ತಿರಬೇಕು. ಅಂಥ ನಾವೀನ್ಯ ಚಿತ್ರಗಳಿಗೆ ಬಣ್ಣ ಹಚ್ಚುವ ಆಸೆ ನನ್ನದು' ಎಂದು ನಿರೀಕ್ಷೆಗಳನ್ನು ಹಂಚಿಕೊಳ್ಳುತ್ತಾರೆ.

'ನನ್ನೊಂದಿಗೆ ನನ್ನನ್ನು ಸವಾಲಿಗೆ ಒಡ್ಡುವಂಥ, ಹಾಗೆಯೇ ನನ್ನ ನಟನೆಯ ಉತ್ಸಾಹವನ್ನು ಇಮ್ಮಡಿಗೊಳಿಸುವಂಥ ಪಾತ್ರಗಳು ಬೇಕು. ಆದರೆ ಯಾವುದೇ ಪಾತ್ರವನ್ನೂ ಒಪ್ಪಿ, ಮಾಡಿಬಿಡಬಲ್ಲೆ ಎನ್ನುವ ಆತ್ಮವಿಶ್ವಾಸ ನನಗೆ ಬೇಗ ಬರುವುದಿಲ್ಲ. ವಿಚಿತ್ರ ಎಂದರೆ, ಈ ಸಣ್ಣ ಅಳುಕೇ ನನಗೆ ಸಹಾಯಕ್ಕೆ ಬರುತ್ತದೆ. ಈ ಅಳುಕು ನನ್ನನ್ನು ಹೆಚ್ಚು ತಿಳಿದುಕೊಳ್ಳಲು, ತೊಡಗಿಸಿಕೊಳ್ಳಲು ಪ್ರೇರಣೆ ನೀಡುತ್ತದೆ' ಎನ್ನುತ್ತಾರೆ.

ತಮ್ಮಲ್ಲಿನ ರಂಗಭೂಮಿಯೆಡೆಗಿನ ಪ್ರೀತಿಯಲ್ಲಿ ಅಪ್ಪನ ಕೊಡುಗೆಯನ್ನು ಸ್ಮರಿಸಿಕೊಳ್ಳುವ ಅವರು, 'ಮಂಡ್ಯ ರಮೇಶ್ ಅವರು ಸಿನಿಮಾ, ಸೀರಿಯಲ್‌ಗಳಲ್ಲಿ ಮಾಡುತ್ತಾರೆ. ಆದರೆ ಮಗಳನ್ನು ರಂಗಭೂಮಿಗೇ ಸೀಮಿತಗೊಳಿಸಿದ್ದಾರೆ ಎಂದು ಕೆಲವರು ಅಪ್ಪನ ಬಗ್ಗೆ ಹೇಳುತ್ತಾರೆ. ಆದರೆ ಅಪ್ಪ ಎಂದಿಗೂ ನನಗೆ ಕಟ್ಟುಪಾಡು ಹಾಕಿದವರಲ್ಲ. ನೀನು ಇನ್ನಷ್ಟು ಕಲಿಯಬೇಕು, ಹೆಚ್ಚೆಚ್ಚು ತಿಳಿದುಕೊಳ್ಳಬೇಕು. ಆಗ ನಿನ್ನ ಜಗತ್ತು ಇನ್ನಷ್ಟು ದೊಡ್ಡದಾಗುತ್ತದೆ ಎಂದು ಪುಟ್ಟ ಮಗುವಿಗೆ ಹೇಳಿದಂತೆ ಹೇಳುತ್ತಲೇ ಇರುತ್ತಾರೆ. ಅಮ್ಮ ಕೂಡ ಈ ಪ್ರೀತಿಗೆ ಹೊರತಲ್ಲ. ವೃತ್ತಿಶ್ರದ್ಧೆಯೇ ಅಪ್ಪನಿಂದ ನಾನು ಕಲಿತ, ನನ್ನನ್ನು ಗಟ್ಟಿಗೊಳಿಸಿದ ಬಹುದೊಡ್ಡ ಸಂಗತಿ' ಎಂದು ನಗುತ್ತಾರೆ.

'ಎಸ್‌ಎಲ್‌ವಿ' ಕಮರ್ಷಿಯಲ್ ಎಂಟರ್‌ಟೇನರ್ ಸಿನಿಮಾ ಆಗಿದ್ದು, ವೆಡ್ಡಿಂಗ್ ಪ್ಲಾನರ್ ಲೀಲಾ ಪಾತ್ರದಲ್ಲಿ ದಿಶಾ ಕಾಣಿಸಿಕೊಂಡಿದ್ದಾರೆ. ತುಂಬು ಮಹತ್ವಾಕಾಂಕ್ಷೆಯ, ಎಲ್ಲಾ ಕೆಲಸವನ್ನೂ ತಾನೇ ಮಾಡಬೇಕೆನ್ನುವ ಹಪಹಪಿ, ಸ್ಪರ್ಧಾ ಮನೋಭಾವ ಇರುವ ಇಂಡಿಪೆಂಡೆಂಟ್ ಹುಡುಗಿಯ ಪಾತ್ರ. ರಾಜಕಾರಣಿಗಳ ಮಕ್ಕಳ ಮದುವೆಗೆ ಪ್ಲಾನ್ ಮಾಡುವ ಅವಕಾಶದ ಸುತ್ತ ಸಿನಿಮಾ ರಂಜಿಸಲಿದೆ ಎಂದು ಸಿನಿಮಾ ಬಗ್ಗೆ ವಿವರಣೆ ನೀಡುತ್ತಾರೆ.

ಸದ್ಯ 'ಎಸ್‌ಎಲ್‌ವಿ' ಹಾಗೂ 'ದಿ' ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿರುವ ದಿಶಾ, ಸಿನಿಮಾಗಳ ಹಿಂದೆ ಅವಸರದಲ್ಲಿ ಓಡುವುದಿಲ್ಲ ಎನ್ನುತ್ತಾರೆ.

'ಹೆಚ್ಚೆಚ್ಚು ಸಿನಿಮಾಗಳನ್ನು ಮಾಡಿಬಿಡಬೇಕೆಂದು ನಾನು ಅವಸರಕ್ಕೆ ಬೀಳುವುದಿಲ್ಲ. ಯಾವುದೇ ಸಿನಿಮಾ, ಪಾತ್ರ ಸಿಕ್ಕಿದರೂ ಮಾಡಿಬಿಡೋಣ, ಒಟ್ಟಿನಲ್ಲಿ ಸ್ಕ್ರೀನ್ ಮೇಲೆ ಕಾಣಿಸಿಕೊಂಡರೆ ಸಾಕು ಎಂಬ ಮನೋಭಾವ ಈ ಕ್ಷಣಕ್ಕೂ ನನ್ನಲ್ಲಿಲ್ಲ. ಮುಂದೆಯೂ ಬರುವುದಿಲ್ಲ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಪ್ರತಿಕ್ರಿಯಿಸಿ:
feedback@sudha.co.in

# ಬಾನ ದಾರಿಯಲ್ಲಿ ಗುಬ್ಬಿ-ಗಣೇಶ್

'ಬಾನ ದಾರಿಯಲ್ಲಿ' ಈಗ ಹೊಸ ರಂಗು. ಈ ದಾರಿಗೆ ರಂಗು ತುಂಬಿರುವವರು ಗಣೇಶ್ ಹಾಗೂ ಪ್ರೀತಂ ಗುಬ್ಬಿ. ದೊಡ್ಡದೊಂದು ಗೆಲುವಿಗೆ ಹಾತೊರೆಯುತ್ತಿರುವ ಈ ಜೋಡಿ ರೂಪಿಸಿರುವ 'ಬಾನ ದಾರಿಯಲ್ಲಿ' ಸಿನಿಮಾ ಮಾರ್ಚ್ 17ರಂದು ತೆರೆಕಾಣಲಿದೆ. ಆ ದಿನಕ್ಕೆ ಬೇರೊಂದು ವಿಶೇಷವೂ ಇದೆ. ಅದು ಪುನೀತ್ ರಾಜ್‌ಕುಮಾರ್ ಹುಟ್ಟಿದ ದಿನ.

ಪುನೀತ್ ನಟನೆ ಹಾಗೂ ಗಾಯನ ಒಳಗೊಂಡ 'ಬಾನ ದಾರಿಯಲ್ಲಿ ಸೂರ್ಯ ಜಾರಿ ಹೋದ' ಗೀತೆಯಿಂದ ಶೀರ್ಷಿಕೆಯನ್ನು ಎರವಲು ಪಡೆದಿರುವ 'ಬಾನ ದಾರಿಯಲ್ಲಿ' ಪ್ರೀತಂ ಗುಬ್ಬಿ ನಿರ್ದೇಶನದ ಸಿನಿಮಾ. ನವಿರು ಪ್ರೇಮಕಥೆಗಳಿಗೆ ಹೆಸರಾದ ಪ್ರೀತಂ, ಕ್ರೀಡಾಪಟುವಿನ ಪಾತ್ರದ ಸುತ್ತ ಪ್ರೇಮಕಥೆಯೊಂದನ್ನು ನಿರೂಪಿಸಿದ್ದಾರೆ. ಕೊರೊನಾ ಕಾರಣದಿಂದಾಗಿ ಮುಂದಕ್ಕೆ ಹೋಗುತ್ತಲೇ ಬಂದ ಸಿನಿಮಾ, ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ. ಪುನೀತ್ ಜನ್ಮದಿನದ ಸಂದರ್ಭದಲ್ಲಿ ಚಿತ್ರವನ್ನು ತೆರೆಕಾಣಿಸುವ ಮೂಲಕ ಅಪ್ಪುವಿನ 'ಬಾನ ದಾರಿ'ಯ ನಂಟನ್ನು ಅಭಿಮಾನಿಗಳಿಗೆ ನೆನಪಿಸುವುದು ಚಿತ್ರತಂಡದ ಉದ್ದೇಶ.

ರುಕ್ಮಿಣಿ ವಸಂತ್ ಹಾಗೂ ರೀಷ್ಮಾ ನಾಣಯ್ಯ ಚಿತ್ರದ ನಾಯಕಿಯರು. ದಕ್ಷಿಣ ಆಫ್ರಿಕಾದಲ್ಲಿ ಚಿತ್ರೀಕರಣ ನಡೆಸಿರುವುದು ಸಿನಿಮಾದ ಮತ್ತೊಂದು ವಿಶೇಷ. ಅರ್ಜುನ್ ಜನ್ಯ ಸಂಗೀತ, ಅಭಿಲಾಷ್ ಕಲ್ಲತ್ತಿ ಛಾಯಾಗ್ರಹಣ ಚಿತ್ರಕ್ಕಿದೆ.

